# ಇಶ್ರತ್ ಜಹಾನ್ ಆರೋಪ ಪಟ್ಟಿ

ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ

'ಐಬಿ ಬಹಿರಂಗ ಪಡಿಸುವುದು ಸಿಬಿಐ ಕೆಲಸವೆ' ಎಂಬ ಶೀರ್ಷಿಕೆಯಡಿ ಎಲ್ಲರ ಗಮನವನ್ನು ನಾನು ಜೂನ್ ೪, ೨೦೧೩ರಲ್ಲಿ ಸೆಳೆದಿದ್ದೆ. ಭಾರತದ ಆಂತರಿಕ ಭದ್ರತೆಯನ್ನು ಭೇದಿಸುವ ಪ್ರಯತ್ನಗಳು ಗಡಿಯಾಚೆಯಿಂದ ಮತ್ತು ಸ್ಥಳೀಯವಾಗಿ ನಡೆಯುತ್ತಿವೆ. ಜಿಹಾದಿ ವಿಧ್ವಂಸಕ ಶಕ್ತಿಗಳಿಂದ ಮೊದಲ್ಗೊಂಡು ಮಾವೋವಾದಿಗಳ ಉಪಟಳದವರೆಗೂ ಭಾರತ ನಿರಂತರ ಸವಾಲುಗಳನ್ನು ಎದುರಿಸುತ್ತಿದೆ. ಈ ಸವಾಲುಗಳನ್ನು ಪ್ರಬಲವಾಗಿ ಎದುರಿಸಲು ನಮ್ಮ ಗುಪ್ತಚರ ವಿಭಾಗ ಮತ್ತು ವಿಧ್ವಂಸಕ ಶಕ್ತಿಗಳ ದಮನಕಾರ್ಯದಿಂದ ಮಾತ್ರ ಸಾಧ್ಯ. ಮಾಹಿತಿ ಸಂಗ್ರಹ ಹಾಗೂ ಪ್ರಸರಣ, ಗುಪ್ತಮಾಹಿತಿ ಸಂಗ್ರಹ, ವಿಧ್ವಂಸಕ ಶಕ್ತಿಗಳ ವ್ಯವಸ್ಥೆಯನ್ನು ಭೇದಿಸುವುದು ಹಾಗೂ ಗುಪ್ತಮಾಹಿತಿ ಒದಗಿಸುವವರಿಗೆ ಆರ್ಥಿಕ ಆಮಿಶ ತೋರಿಸಿ ಅಂತಹ ವ್ಯವಸ್ಥೆಯನ್ನು ಧ್ವಂಸಗೊಳಸುವ ಕಾರ್ಯಾಚರಣೆ ಚುರುಕುಗೊಳ್ಳಬೇಕಿದೆ. ಈ ಕಾರ್ಯಾಚರಣೆಯನ್ನು ನಮ್ಮ ಬೇಹುಗಾರಿಕೆ ವಿಭಾಗ ಅತಿ ಗೌಪ್ಯವಾಗಿ ನೆರವೇರಿಸಬೇಕಿದೆ. ಗೌಪ್ಯ ಕಾರ್ಯಾಚರಣೆಗಳು ಸಂಭವಿಸುತ್ತವೆ ಮತ್ತು ಅವನ್ನು ಕದಾಪಿ ದೃಢಪಡಿಸಲಾಗದು. ಭಾರತದಲ್ಲಿ ಸರ್ಕಾರದ ಆಂತರಿಕ ಪ್ರಕ್ರಿಯೆ ಅಡಿ ಬೇಹುಗಾರಿಕೆ ಸಂಸ್ಥೆಗಳು ಕಾರ್ಯನಿಭಾಯಿಸುವುದರಿಂದ ಹಲವಾರು ಇಂತಹ ಕಾಯಾಚರಣೆಗಳಿಗೆ ಶಾಸನಾತ್ಮಕ ಕಾನೂನುಗಳ ಬೆಂಬಲವಿರುವುದಿಲ್ಲ. ಸಾರ್ವಜನಿಕ ಹಾಗೂ ರಾಷ್ಟ್ರೀಯ ಹಿತಾಸಕ್ತಿಗಾಗಿ ಈ ಕಾರ್ಯಾಚರಣೆಗಳು ಆವಶ್ಯಕವೆನಿಸಿವೆ. ಬರುವ ದಿವಸಗಳಲ್ಲಿ ನಮ್ಮ ಪ್ರಜಾಪ್ರಭುತ್ವ ಪಕ್ವವಾದಂತೆ ಇಂತಹ ಕಾರ್ಯಾಚರಣೆಗಳನ್ನು ಕಾನೂನಿನ ಚೌಕಟ್ಟಿಗೆ ತರುವ ಮತ್ತು ತಕ್ಕಮಟ್ಟಿಗೆ ಸಂಸತ್ ವಿಚಕ್ಷಣೆಗೆ ಒಳಗಾಗುವುದು ಎಂಬ ವಿಶ್ವಾಸ ನನ್ನದು.

ಇಶ್ರತ್ ಜಹಾನ್ ಭಾಗಿಯಾಗಿದ್ದ ಭಯೋತ್ಪಾದಕ ಸಮೂಹಗಳ ಚಟುವಟಿಕೆಗಳ ಮಾಹಿತಿ ನಮ್ಮ ಬೇಹುಗಾರಿಕೆ ಸಂಸ್ಥೆಗಳಿಗೆ ಇತ್ತು. ಈ ಮಾಹಿತಿಯನ್ನು ಸಂಸ್ಕರಿಸಿ ಬಿತ್ತರಿಸುವ ಕಾರ್ಯ ನಡೆದಿತ್ತು. ವಿಧ್ವಂಸಕ ಸಮೂಹವನ್ನು ಭೇದಿಸಿ ಅದರ ದುರುದ್ದೇಶ ಸಾಧನೆಯನ್ನು ವಿಫಲಗೊಳಿಸಲಾಯಿತು. ಲಾಹೋರ್ ಮೂಲದ ಘಜ್ವಾ ಟೈಮ್ಸ್ ಪತ್ರಿಕೆಯಲ್ಲಿ ಜಮಾತ್–ಉದ್–ದವಾ(ಜೆಯುಡಿ) ಸಂಸ್ಥೆ ಆಕೆಯ ಸಾವಿನ ಸುದ್ದಿಯನ್ನು ಪ್ರಕಟಿಸಿದ್ದನ್ನು ನೋಡಿದರೆ, ಇಶ್ರತ್ ಲಷ್ಕರ್–ಎ–ತೊಯ್ಯಬ(ಎಲ್ಇಟಿ) ಸದಸ್ಯೆಯಾಗಿದ್ದಳು ಎನ್ನುವುದು ರುಜುವಾತಾಗುತ್ತದೆ. ನಂತರ ಡೇವಿಡ್ ಹೇಡ್ಲಿ ಕೂಡ ಎಫ್‌ಬಿಐ ಮತ್ತು ಎನ್‌ಐಎ ವಿಚಾರಣೆ ವೇಳೆ ಇದನ್ನು ಒಪ್ಪಿಕೊಂಡಿದ್ದಾನೆ. ಭಾರತದ ಅಮೇರಿಕ ರಾಯಭಾರಿ ಕಚೇರಿಯ ಕಾನೂನು ವಿಷಯದ ತಜ್ಞರು ಸಹ ನಮ್ಮ ಗುಪ್ತಚರ ವಿಭಾಗದ ಕೋರಿಕೆ ಮೇರೆಗೆ ನೀಡಿರುವ ದಾಖರಾತಿಗಳ ಪ್ರಕಾರ ವಿಧ್ವಂಸಕ ಸಮೂಹದ ಕಾರ್ಯಾಚರಣೆ ಸತ್ಯವೆಂದು ಧೃಢಪಡಿಸಿದೆ.

ಇಶ್ರತ್ ಜಹಾನ್ ಹಾಗೂ ಆಕೆಯ ಸಹಚರರ ಎನ್‌ಕೌಂಟರ್ ನಡೆಯಿತು ಎಂದು ಆರೋಪಿಸಿದಾಗ, ಯುಪಿಎ ಒಂದು ಸರ್ಕಾರ ಆಗಲೇ ಅಧಿಕಾರದಲ್ಲಿತ್ತು. ಆಕೆಯ ಪೋಷಕರು ಗುಜರಾತ್ ಉಚ್ಚ ನ್ಯಾಯಾಲಯದಲ್ಲಿ ಹೂಡಿದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯಲ್ಲೂ ಸಹ, ಇಶ್ರತ್ ಎಲ್‌ಇಟಿ ಸದಸ್ಯೆಯಾಗಿದ್ದಳು ಹಾಗೂ ಜೂನ್ ೧೫, ೨೦೦೪ರಂದು ನಡೆಯಿತು ಎನ್ನಲಾದ ಎನ್‌ಕೌಂಟರ್ ಪ್ರಾಮಾಣಿಕವಾಗಿತ್ತು ಎಂದು ಕೇಂದ್ರ ಸರ್ಕಾರವೂ ಮುಚ್ಚಳಿಕೆ ಬರೆದು

ಕೊಟ್ಟಿತ್ತು. ಶ್ರೀ ಶಿವರಾಜ್ ಪಾಟಿಲ್ ಗೃಹ ಸಚಿವರಾಗಿದ್ದ ಸಂದರ್ಭದಲ್ಲಿ ಈ ಬೆಳವಣಿಗೆ ನಡೆಯಿತು. ಗೃಹ ಸಚಿವರ ಬದಲಾವಣೆಯೊಂದಿಗೆ ಸರ್ಕಾರದ ನಿಲುವಿನಲ್ಲೂ ಬದಲಾವಣೆ ಆಯಿತು. ಶ್ರೀ ಪಿ.ಚಿದಂಬರಂ ಹೊಸದಾಗಿ ಗೃಹ ಸಚಿವಾಲಯದ ಉಸ್ತುವಾರಿ ಸ್ವೀಕರಿಸಿದ ನಂತರ ಎನ್‌ಕೌಂಟರ್ ವಿಚಾರದಲ್ಲಿ ಗೃಹ ಸಚಿವಾಲಯ ನೀಡಿದ ಪ್ರಮಾಣಪತ್ರದಲ್ಲಿ ತನ್ನ ಕೈತೊಳೆದುಕೊಂಡಿತು. ಇಡೀ ಕಾರ್ಯಾಚರಣೆಯ ವಿಚಾರಣೆ ನಡೆಸುವಾಗ ಮೊಕದ್ದಮೆ ಹೂಡಿದವರ ನೆರವಿಗೆ ಧಾವಿಸಿತು. ಗುಜರಾತ್ ಸರ್ಕಾರವನ್ನು ರಾಜಕೀಯವಾಗಿ ಮಟ್ಟ ಹಾಕಲು ವಿಫಲವಾದ ಪಕ್ಷ ಪರೋಕ್ಷವಾಗಿ ವಿಚಾರಣೆಯ ದಿಕ್ಕು ಬದಲಾಯಿಸುವ ಮೂಲಕ ಗುಜರಾತ್ ಸರ್ಕಾರದ ಪ್ರಮುಖ ನಾಯಕರ ವಿರುದ್ಧ ಪಿತೂರಿ ಹೂಡಲಾರಂಭಿಸಿತು.

ನ್ಯಾಯಾಲಯ ರೂಪಿಸಿದ ವಿಶೇಷ ತನಿಖಾ ತಂಡ ವಿಚಾರಣೆ ನಡೆಸಿದ ನಂತರ ತನಿಖೆಯನ್ನು ಸಿಬಿಐಗೆ ವಹಿಸಲಾಯಿತು. ಮೊಕದ್ದಮೆ ಹೂಡಿದ ಇಶ್ರತ್ ಪೋಷಕರು ಆಯ್ಕೆ ಮಾಡಿದ ವ್ಯಕ್ತಿಯನ್ನೇ ತನಿಖಾ ತಂಡದ ಸದಸ್ಯರನ್ನಾಗಿ ಮಾಡಲಾಯಿತು. ವಿಶೇಷ ತನಿಖಾ ತಂಡದಲ್ಲಿ ಮೂರು ಸದಸ್ಯರು ಇದ್ದರು. ಇವರಲ್ಲಿ ಒಬ್ಬರು ಫಿರಿಯಾದುದಾರರ ಪ್ರತಿನಿಧಿಯಾಗಿದ್ದರು. ಎಫ್‌ಐಆರ್‌ನಲ್ಲಿ ನೇಮಿಸಲಾದ ಹಲವರು ಗುಜರಾತ್ ಪೋಲಿಸ್ ಇಲಾಖೆಯವರಾಗಿದ್ದು ಅವರನ್ನು ವಶಕ್ಕೆ ಪಡೆಯಲಾಯಿತು. ಅವರ ವಿಚಾರಣೆ ನಡೆಸಲಾಯಿತು ಮತ್ತು ರಾಜಕೀಯ ಲಾಭಕ್ಕಾಗಿ ಅವರೊಂದಿಗೆ ಒಳ ಒಪ್ಪಂದ ಮಾಡಿಕೊಳ್ಳಲಾಯಿತು. ಕಾನೂನು ಅಡಿ ಗರಿಷ್ಠ ೯೦ ದಿವಸಗಳಲ್ಲಿ ಸಲ್ಲಿಸಬೇಕಾದ ಆರೋಪಪಟ್ಟಿಯನ್ನು ಉದ್ದೇಶಪೂರ್ವಕವಾಗಿ ಕೈಬಿಡಲಾಯಿತು. ಆದ್ದರಿಂದ ತಾನಾಗಿಯೇ ಅವರಿಗೆ ಜಾಮೀನು ದೊರೆಯಿತು. ಕೊಲೆಯ ಪ್ರತ್ಯಕ್ಷದರ್ಶಿಗಳಾದ ಕೆಲವರು ಸೇರಿದಂತೆ, ಸಾಕ್ಷಿಗಳಾಗಿ ಹೇಳಿಕೆ ನೀಡಲು ಒಪ್ಪಿದವರ ಹೆಸರುಗಳನ್ನು ಆರೋಪ ಪಟ್ಟಿಯಿಂದ ತೆರೆಯಲಾಯಿತು. ಸಾಕ್ಷಿಗಳ ಹೇಳಿಕೆಗಳೇ ಅವರ ಆರೋಪ ದೃಢ ಪಡಿಸಿದರೂ, ಅವರನ್ನು ಆರೋಪಿಗಳೆಂದು ಅಥವಾ ಸರ್ಕಾರದ ಪರ ಸಾಕ್ಷಿಗಳೆಂದು ಪರಿಗಣಿಸದೆ ಕೇವಲ ಸಾಕ್ಷಿಗಳೆಂದು ನ್ಯಾಯಾಲಯದಲ್ಲಿ ಹಾಜರು ಪಡಿಸಲಾಗುತ್ತದೆ. ಮೊದಲ ಹಾಗೂ ಎರಡನೆ ಆರೋಪಪಟ್ಟಿಯ ಆರೋಪಿತರ ಪಟ್ಟಿಯಿಂದ ಅವರ ಹೆಸರನ್ನು ತೆರೆಯಲಾಗುತ್ತದೆ. ಕಾನೂನಿಗೆ ಅರಿಯದ ಪದ್ಧತಿಯನ್ನು ಅನುಸರಿಸಲಾಗುತ್ತದೆ. ಪರಿಚ್ಛೇದ ೧೬೪ ಸಿಆರ್‌ಪಿಸಿ ಅಡಿ ಇವರ ಹೇಳಿಕೆಗಳನ್ನು ಅಹಮದಾಬಾದ್‌ನಲ್ಲಿ ದಾಖಲಿಸುವ ಬದಲು ಮುಂಬೈನಲ್ಲಿ ದಾಖಲಿಸಲಾಯಿತು. ತಮ್ಮೊಂದಿಗೆ ಆರೋಪ ಎದುರಿಸುವವರ ವಿರುದ್ಧವೇ ಸಾಕ್ಷಿ ಹೇಳಲು ಸಾಧ್ಯವಿಲ್ಲ. ಅಪ್ರೂವರ್ ಆದರೆ ಮಾತ್ರ ಅನ್ಯ ಆರೋಪಿಗಳ ವಿರುದ್ಧ ಸಾಕ್ಷಿ ಹೇಳುವ ಅವಕಾಶವಿದೆ. ಎನ್‌ಕೌಂಟರ್ ನಡೆದಿದೆ ಎನ್ನಲಾದ ಘಟನೆಯ ಪ್ರತ್ಯಕ್ಷದರ್ಶಿಗಳನ್ನು ಆರೋಪಿಗಳ ಪಟ್ಟಿಯಿಂದ ತೆರವುಗೊಳಿಸಿ, ಪ್ರತ್ಯಕ್ಷದರ್ಶಿಗಳಲ್ಲದವರ ವಿರುದ್ಧ ಅವರ ಮೂಲಕ ಸಾಕ್ಷಿ ಹೇಳಿಸುವ ಸಂಚು ಇದಾಗಿದೆ.

ಗುಜರಾತ್‌ನ ರಾಜಕೀಯ ನಾಯಕರನ್ನೂ ಆರೋಪಿತರನ್ನಾಗಿ ಬಣ್ಣಿಸುವ ವಿಫಲ ಯತ್ನ ಮಾಡಲಾಯಿತು. ಬಿಳಿ ಕರಡಿ ಹಾಗೂ ಕಪ್ಪು ಕರಡಿಯ ಕಥೆಯನ್ನು ಕಟ್ಟಲಾಯಿತು. ಆದರೆ ಅಷ್ಟೋ ಇಷ್ಟು ಸಾಕ್ಷಾಧಾರಗಳಿಂದ ಆರೋಪ ಸಿದ್ದಪಡಿಸಲು ಆಗದು. ನಂತರ ಗುಪ್ತಚರ ವಿಭಾಗದ ಅಧಿಕಾರಿಗಳೇ ಸಂಚು ರೂಪಿಸಿದವರ ಕೆಂಗಣ್ಣಿಗೆ ಗುರಿಯಾದರು. ಸಾಕ್ಷಾಧಾರಗಳನ್ನು ಸಂಗ್ರಹಿಸಿದ, ವಿಚ್ಛಿದ್ರಕಾರಿ ಸಂಘಟನೆಯ ವ್ಯೂಹ ಭೇದಿಸಿದ ಹಾಗೂ ಆರೋಪಿಗಳ ವಿಚಾರಣೆ ನಡೆಸಿದವರನ್ನೇ ಆರೋಪಿಗಳೆಂದು ದೂರಲಾಯಿತು. ಕೊಲೆಯಾದವರ ಭಯೋತ್ಪಾದನೆ

ಹಿನ್ನಲೆಯ ಕುರುಹುಗಳನ್ನು ಪೂರ್ವಾನ್ವಯವಾಗುವಂತೆ ಅಳಿಸಲಾಯಿತು. ಎರಡು ವಿಭಿನ್ನ ಆರೋಪಪಟ್ಟಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಯಿತು.

ನಡೆದಿದೆ ಎನ್ನಲಾದ ಎನ್ಕೌಂಟರ್ ಯುಪಿಎ ಮೊದಲ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರವೇ ಸಂಭವಿಸಿತು. ಗುಜರಾತ್ ರಾಜ್ಯದ ರಾಜಕೀಯ ಧುರೀಣರ ವಿರುದ್ಧ ಬಲವಾದ ಸಾಕ್ಷಿಗಳಿಲ್ಲ. ಕೇಂದ್ರ ಗುಪ್ತಚರ ವಿಭಾಗದ ಗೌಪ್ಯ ಕಾರ್ಯಾಚರಣೆಯನ್ನೇ ಕ್ರಿಮಿನಲ್ ಕಾನೂನು ತನಿಖೆಯ ವಿಷಯವಾಗಿ ಪರಿಗಣಿಸಲಾಯಿತು. ಗುಪ್ತಚರ ವಿಭಾಗದ ಗೌಪ್ಯ ಮಾಹಿತಿ ಮೂಲ, ಅಂಥಹ ಮಾಹಿತಿಯ ವಿಶ್ವಾಸಾರ್ಹತೆ, ಅಂಥಹ ಮಾಹಿತಿಯ ಪ್ರಸರಣ, ವ್ಯೂಹ ಭೇದನಾ ತಂತ್ರಗಾರಿಕೆ, ವಿಚಾರಣಾ ವಿಧಿ, ವ್ಯೂಹ ಭೇದನಾ ಸೌಲಭ್ಯಗಳನ್ನು ಒದಿಗಿಸಿದ ಸಂಸ್ಥೆಯ ವಿವರಗಳನ್ನು ಕ್ರಿಮಿನಲ್ ಕಾನೂನು ತನಿಖೆಯ ವಿಷಯವಾಗಿ ಪರಿಗಣಿಸಬೇಕಾಗುತ್ತದೆ. ನರೇಂದ್ರ ಮೋದಿ ಹಾಗೂ ಅಮಿತ್ ಶಾ ಅವರ ಮೇಲೆ ದೋಷ ಹೊರೆಸುವ ಕುತಂತ್ರವನ್ನು ೨೦೦೯ರಲ್ಲಿದ್ದ ಗೃಹ ಸಚಿವರು ರೂಪಿಸಿದ್ದರು. ಆದರೆ ಅವರ ಕುತಂತ್ರ ಫಲ ನೀಡದೆ, ಯುಪಿಎ ಸರ್ಕಾರದ ಅವಧಿಯಲ್ಲಿ ನಕಲಿ ಎನ್‌ಕಂಟರ್ ನಡೆಸುವ ಆರೋಪ ಹೊತ್ತ ಗುಪ್ತಚರ ವಿಭಾಗವೇ ಆರೋಪಿ ಸ್ಥಾನ ಏರಬೇಕಾಯಿತು. ಎನ್‌ಕೌಂಟರ್ ಸತ್ಯಾಸತ್ಯತೆಯನ್ನು ಘನತೆವೆತ್ತ ನ್ಯಾಯಾಲಯ ಪರಿಶೀಲಿಸುತ್ತದೆ. ಆದರೆ, ಭಾರತದ ಗುಪ್ತಚರ ವಿಭಾಗದ ಗೌಪ್ಯ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಮತ್ತು ಮನೋಬಲದ ಮೇಲೆ ಮಾಡಲಾದ ಘಾತಕ ದಾಳಿಯ ಪರಿಣಾಮ ಸರಿಪಡಿಸಲು ಅಸಾಧ್ಯ. ನಾನು ಜೂನ್ ೪, ೨೦೧೩ರಂದು ಬರೆದ ಲೇಖನದಲ್ಲಿ ಕೆಳಕಂಡಂತೆ ತಿಳಿಸಿದ್ದೆ, "ಕೇವಲ ಪಾಕಿಸ್ತಾನ ಮತ್ತು ಎಲ್‌ಇಟಿ ಇದರ ಪ್ರಯೋಜನ ಪಡೆದುಕೊಂಡಾರು. ನಮ್ಮ ದೇಶದ ಸಂಸ್ಥೆಗಳನ್ನು ನಾಶ ಪಡಿಸುವ ಅಪಾಯವನ್ನು ದೆಹಲಿಯ ಸಂಕುಚಿತ ಮನೋಭಾವವುಳ್ಳ ಸರ್ಕಾರ ಅರ್ಥಮಾಡಿಕೊಂಡಿಲ್ಲ. ಭಾರತದ ಭದ್ರತಾ ವ್ಯವಸ್ಥೆಯನ್ನು ನಾಶಪಡಿಸಿಯಾದರು ಸರಿ, ಗುಜರಾತ್ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬೇಕು ಎಂಬುದೊಂದೇ ಕಾಂಗ್ರೆಸ್ ಪಕ್ಷದ ಉದ್ದೇಶವೆಂದು ಸ್ಪಷ್ಟವಾಗಿದೆ."

********